ISSN: 2249-894X IMPACT FACTOR : 3.8014 (UIF) VOLUME - 6 | ISSUE - 8 | MAY - 2017

REVIEW OF RESEARCH

# ಡಾ. ಚಂದ್ರಶೇಖರ ಕಂಬಾರರ 'ಮಹಾಮಾಯಿ'ಯ ಪಾತ್ರ ಸಂಘರ್ಷ

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ

ದೈತ್ಯ ಪ್ರತಿಭೆಯುಳ್ಳ, ಕನ್ನಡ ಸಾಹಿತ್ಯ ಕಂಡ ಶ್ರೇಷ್ಠ ಸಾಹಿತಿಗಳು ಡಾ. ಚಂದ್ರಶೇಖರ ಕಂಬಾರರು. ದ.ರಾ. ಬೇಂದ್ರೆಯಂತೆ ಜನಪದ ಶೈಲಿಯನ್ನೆ ತಮ್ಮ ಮೈಗೂಡಿಸಿಕೊಂಡ ಕಂಬಾರರು ಗ್ರಾಮೀಣ ಜನರ ಮುಗ್ಧ ಹಸಿ ಹಸಿ ಸತ್ಯವನ್ನು ಓದುಗರ ಮುಂದಿಡುತ್ತಾರೆ. ಕಂಬಾರರು ಹುಟ್ಟಿದ್ದು ಬೆಳಗಾವಿ, ಶಿಕ್ಷಣ ಪಡೆದದ್ದು ಬೆಳಗಾವಿ ಮತ್ತು ಧಾರವಾಡದಲ್ಲಿ. ಉಪನ್ಯಾಸಕ ವೃತ್ತಿಯಿಂದ ಜೀವನ ಹಂತ ಹಂತವಾಗಿ ದೇಶ ವಿದೇಶಗಳಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. 1992ರಿಂದ 1998ರವರೆಗೆ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮೊಟ್ಟಮೊದಲ ಕುಲಪತಿಯಾಗಿ ಸೇವೆ ಸಲ್ಲಿಸಿದರು.

ಕನ್ನಡ ಸೃಜನ ಬರಹಗಾರರಲ್ಲಿ ಒಬ್ಬರಾದ ಕಂಬಾರರು ಕವನ ಸಂಕಲನ, ನಾಟಕ, ಮಹಾಕಾವ್ಯ, ಕಾದಂಬರಿ ಕ್ಷೇತ್ರಗಳಲ್ಲಿ ವಿಶ್ವವಿಖ್ಯಾತವಾಗಿದ್ದಾರೆ. ಇವರ ಹಲವು ಕಾದಂಬರಿಗಳು ಮತ್ತು ನಾಟಕಗಳು ಚಲನಚಿತ್ರ ಮತ್ತು ಧಾರಾವಾಹಿಗಳಾಗಿವೆ. ಕನ್ನಡ ಓದುಗರ ಅಚ್ಚುಮೆಚ್ಚಿನ ಕಾದಂಬರಿ ಸಿಂಗಾರವ್ವ ಮತ್ತು ಅರಮನೆ ಹಾಗೂ ಕರಿಮಾಯಿ, ಜಿ.ಕೆ. ಮಾಸ್ತರ ಪ್ರಣಯ ಪ್ರಸಂಗ, ಸುಮಾರು 20 ಕ್ಕಿಂತ ಹೆಚ್ಚು ನಾಟಕಗಳನ್ನು ಬರೆದವರು. ಋಷ್ಯಶೃಂಗ 1971, ಜೋಕುಮಾರಸ್ವಾಮಿ 1971, ಸಂಗ್ಯಾಬಾಳ್ಯಾ ಅನಬೇಕೋನಾಡೊಳಗ 1975, ಜೈಸಿದನಾಯಕ 1975, ಹರಕೆಯ ಕುರಿ 1983 ಮತ್ತು ಮಹಾಮಾಯಿ 1999.

## ಪ್ರಸ್ತಾವನೆ

ಮಹಾಮಾಯಿ ನಾಟಕ ಪೌರಾಣಿಕ ಸಂಕಥನ ಒಳಗೊಂಡಿದ್ದರು ಇದರ ಕಥನಕ್ರಿಯೆಯಲ್ಲಿ ವ್ಯಕ್ತಿ ಬಿಡುಗಡೆ ಹೊಂದಲು ನಡೆಸುವ ಹೋರಾಟವಾಗಿದೆ. ಕೇವಲ 80 ಪುಟಗಳಲ್ಲಿ ಹನ್ನೊಂದು ವಿಭಾಗಗಳನ್ನು ಮಾಡಿಕೊಂಡು ರಚಿಸಿದ ಒಂದು ಪುಟ್ಟ ಕನ್ನಡಿ.

ಮಹಾಮಾಯಿಯಲ್ಲಿ ಬರುವ ಪಾತ್ರಗಳು ಒಂದಕ್ಕೊಂದು ಒರೆಗೆ ಹಚ್ಚಿ ನೋಡುತ್ತಲೆ ಇರುತ್ತವೆ. ಗಿರಿಮಲ್ಲಿಗೆ, ತಾಯಿ (ಶೆಟವಿ ತಾಯಿ), ಶಿವ, ಸಂಜೀವಶಿವ, ರಾಜಕುಮಾರಿ, ಪುಷ್ಪಗಂಧಿ, ಮದನ ತಿಲಕ, ಮಂಜರಿ, ಮಂಜರಿಯಭೂತ, ಮದರಂಗಿ, ಮುದುಕಿ, ಸೇಡುಮಾರಿ, ರಾಜ, ಮಾರ, ಮಂತ್ರಿ ಮತ್ತು ನಾಟಕಕ್ಕೆ ಪೂರಕ ಪಾತ್ರಗಳೆಂದರೆ ಸೈನಿಕ, ಸೇವಕ, ಸೇವಕಿ, ಪಕ್ಷಿ, ಕೀರ್ತಿ ಶೀವನ ಭೂತ ಇನ್ನೂ ಹಲವು ಪಾತ್ರಗಳು ಬರುತ್ತವೆ. ಇಲ್ಲಿ ಬರುವ ಹಲವು ಪಾತ್ರಗಳಲ್ಲಿ ಶೆಟವಿ ತಾಯಿ ಮತ್ತು ಈ ನಾಟಕದ ನಾಯಕ ಪಾತ್ರದಲ್ಲಿರುವ ಸಂಜೀವ ಶಿವನ ನಡುವೆ ವೈರುಧ್ಯಗಳು ಹುಟ್ಟಿಕೊಂಡು ತಾಯಿ ಮತ್ತು ಮಗನಲ್ಲಿ ಯಾರು ಹೆಚ್ಚು ಎಂದು ಸಂಘರ್ಷಕ್ಕೆ ಇಳಿಯುತ್ತಾರೆ.

ಡಾ. ಚಂದ್ರಶೇಖರ ಕಂಬಾರರ 'ಮಹಾಮಾಯಿ' ನಾಟಕದಲ್ಲಿ ಬರುವ ಪಾತ್ರಗಳು ಓದುಗರ ಮನಸ್ಸಿನ ಮೇಲೆ ಅಚ್ಚಳಿಯದೇ ಉಳಿಯುತ್ತವೆ. ಸುಮಾರು ಇಪ್ಪತ್ತಕ್ಕೂ ಹೆಚ್ಚು ಪಾತ್ರಗಳು ಬರುತ್ತವೆ. ಸಂಜೀವಶಿವ ಮತ್ತು ಶೆಟವಿತಾಯಿ ಪರಸ್ಪರ ಸಂಘರ್ಷಗಳು ನಾಟಕದ ಕೊನೆಯವರೆಗೂ ನಡೆಯುತ್ತದೆ. ಸಂಜೀವಶಿವ ತನ್ನ ತಾಯಿಯ ದೈವೀ ವರದಾನದಿಂದ (ಶೆಟವಿತಾಯಿ) ಬಿಡುಗಡೆ ಪಡೆಯಲು ಹೋರಾಟಮಾಡುತ್ತಾನೆ. ಶೆಟವಿ ತಾಯಿ ರೋಗಿಯ ಬಲಕ್ಕೆ ಬಂದರೆ ವೈದ್ಯ ಮಾಡುತ್ತಾನೆ. ಒಂದು ವೇಳೆ ತಾಯಿ ಎಡಕ್ಕೆ ಬಂದರೆ ಆತ ವೈದ್ಯ ಮಾಡಲಾರ ಆತನಿಗೆ ತನ್ನ ವೈದ್ಯ ಪದ್ಧತಿ ಹೆಚ್ಚೋ ಅಥವಾ ತಾಯಿಯ ವರದಾನ ಹೆಚ್ಚೋ? ಎನ್ನುವ ವಿಷಯ ಕಾಡುತ್ತದೆ. ಆದ್ದರಿಂದಲೇ ರೋಗಿಯಾದ ರಾಜಕುಮಾರಿಯ



ಎಡಕ್ಕೆ ತಾಯಿ ಪ್ರತ್ಯಕ್ಷವಾದರೂ ವೈದ್ಯಮಾಡುತ್ತಾನೆ. ಇದರಿಂದ ಶೆಟಿವಿತಾಯಿ ಸಂಜೀವಶಿವನ ಮೇಲೆ ಕುಪಿತಳಾಗುತ್ತಾಳೆ.

**ಸಂಜೀವಶಿವ–ಶೆಟಿವಿತಾಯಿ**

ಸಂಜೀವಶಿವ ತಾಯಿಯ ವಚನವನ್ನು ಮೀರಿ ರಾಜಕುಮಾರಿಗೆ ವೈದ್ಯಮಾಡುತ್ತಾನೆ. ಇದರಿಂದ ಕೆಂಡಾಮಂಡಲವಾದ ತಾಯಿ, ಸಂಜೀವಶಿವನ ಪ್ರೀತಿಯ ಜಿಂಕೆ (ನೇತ್ರಾವತಿ) ಮರಿಯನ್ನು ಬಲಿ ತೆಗೆದುಕೊಂಡಿದ್ದಾಳೆ. ಸಂಜೀವಶಿವ ನಯವಾಗಿಯೇ ತಾಯಿಯನ್ನು ಪ್ರಶ್ನೆಮಾಡುತ್ತಾನೆ.

**"ಸಂಜೀವಶಿವ: ರಾಜಕುಮಾರಿ ಗವಿಪ್ರವೇಶ ನಿಷೇಧಿಸಿದ್ದಕ್ಕೂ ನೇತ್ರಾವತಿಯ ಸಾವಿಗೂ ಸಂಬಂಧವುಂಟೆ ತಾಯಿ?**
**ತಾಯಿ: ಇದ್ದರೆ ಸಾವವರಿಗೆ ಜೀವಕೊಡುವ ಇಲ್ಲವೇ ಜೀವರ ಜೀವ ತೆಗೆವ ಪ್ರಬುದ್ಧ ವೈದ್ಯ ನಿನಗೆ ಗೊತ್ತಪ್ಪ**
**ಸಂಜೀವಶಿವ: ನಿನ್ನ ಮಾರ್ಗದರ್ಶನ ಪಡೆಯದೆ ರಾಜಕುಮಾರಿಗೆ ಮದ್ದು ಕೊಟ್ಟುದಕ್ಕೆ ಕೋಪವೇ ತಾಯಿ**
**ತಾಯಿ: ಹಿಂದೆ ಸಣ್ಣವನಿದ್ದಾಗ ಹೇಳಿದ ಹಿತನುಡಿಗಳ ಪಾಲಿಸುತ್ತಿದ್ದೆ"**[1]

ಎಂದು ವ್ಯಂಗವಾಗಿಯೇ ನುಡಿಯುತ್ತಾಳೆ ಮತ್ತು ನೀನು ಅಂತರಂಗದಲ್ಲೊಂದು ಬಹಿರಂಗದಲ್ಲೊಂದು ಹೇಳುತ್ತಿರುವೆ ಎಂದು ಪ್ರಶ್ನೆ ಮಾಡುತ್ತಾಳೆ.

**"ರೋಗಿ ಬದುಕೋದು ತಾಯ ಮಾರ್ಗದರ್ಶನದಿಂದಲೋ? ನಿನ್ನ ಮದ್ದಿನಿಂದಲೋ –ಎಂಬುದನ್ನು ಒರೆಗೆ ಹಚ್ಚುವ ತವಕ ನಿನ್ನಲ್ಲಿರಲಿಲ್ಲವೇ?"**[2] ತಾಯಿಯ ನೆಪದ ಮಾರ್ಗದರ್ಶನಕ್ಕಿಂತ ನಿನ್ನ ಮದ್ದೇ ಮೇಲೆಂಬ ಒಳ ಅಹಂಕಾರ ನಿನ್ನಲ್ಲಿರಲಿಲ್ಲವೆ? ಎನ್ನುತ್ತಾಳೆ. ಸಂಜೀವಶಿವ ಶಾಂತವಾಗಿಯೆ ಉತ್ತರಿಸುತ್ತಾನೆ. ರಾಜಕುಮಾರಿಯ ಕೊರಳಿನಲ್ಲಿ ಕಟ್ಟಿರುವ ಗಿಡಮೂಲಿಕೆಯ ಬಳ್ಳಿ ತೆಗೆಯುವಂತೆ ಸೂಚಿಸುತ್ತಾಳೆ ಶೆಟಿವಿತಾಯಿ ಸಂಜೀವಶಿವನಿಗೆ ಸೂಚಿಸುತ್ತಾಳೆ. ಇಲ್ಲದಿದ್ದರೆ ನಿನಗೆ ಅಂದೆ ಸಾವು ಎಂದು ಹೇಳುತ್ತಾಳೆ. ಎಷ್ಟು ಹೇಳಿದರು ಸಂಜೀವಶಿವ ರಾಜಕುಮಾರಿಯ ಕೊರಳಿನಲ್ಲಿರುವ ಗಿಡಮೂಲಿಕೆಯ ಬಳ್ಳಿ ತೆಗೆಯಲಾರ. ಸಂಜೀವಶಿವ ತೆಗೆಯಬೇಕು ಎಂದರೆ ರಾಜಕುಮಾರಿ ಅದನ್ನು ಮಾಂಗಲ್ಯ ಎಂದು ತಿಳಿದುಕೊಂಡಿದ್ದೇನೆ. ನಾನು ತೆಗೆಯಲಾರೆ ಎಂದು ಹೇಳುತ್ತಾಳೆ. ಈ ಕಡೆ ತಾಯಿಯ ಆಜ್ಞೆ ಆ ಕಡೆ ತಾನು ಪ್ರೀತಿಸಿದ ರಾಜಕುಮಾರಿ ಬದುಕಬೇಕೆಂಬ ಆಸೆ ಎರಡರ ತಾಕಲಾಟದಲ್ಲಿ ಸಂಜೀವಶಿವ ಸಿಲುಕುತ್ತಾನೆ. ತನ್ನ ವೈದ್ಯವೃತ್ತಿಯಿಂದ ರಾಜಕುಮಾರಿಯನ್ನು ಬದುಕಿಸಬೇಕೆಂಬ ಹಠ ಅವನಲ್ಲಿ ಬೆಳೆಯುತ್ತದೆ. ಇಬ್ಬರೂ ರಾತ್ರೋರಾತ್ರಿ ಅರಮನೆ ತೊರೆದು ಕಾಡಿನಲ್ಲಿ ಸುತ್ತಿ ಕೊನೆಗೆ ಮಾಯಿಬೆಟ್ಟಕ್ಕೆ ಬಂದು ಸಾವಿನ ಗವಿಯೊಳಗೆ ತಮಗೆ ತಿಳಿಯದಂತೆ ಸಿಲುಕುತ್ತಾರೆ. ಒಳಗಡೆ ಬಂದ ಮೇಲೆ ತಾಯಿಯನ್ನು ಸಂಜೀವಶಿವ ಪ್ರಶ್ನೆಮಾಡುತ್ತಾನೆ.

**"ಸಂಜೀವಶಿವ:ನಾನು ವೈದ್ಯಮಾಡಿದ ಮೇಲೆ ರೋಗಿ ಬದುಕಲೇಬೇಕಂದು ತಾಯಿ ನನಗಿತ್ತ ವರ ಹುಸಿಯಾಗಲಿಲ್ಲವೇ?**
**ಗಿರಿಮಲ್ಲಿಗೆ: ರೋಗಿಯ ಎಡ ಇಲ್ಲವೆ ಬಲದಲ್ಲಿ ತಾಯಿ ಪ್ರತ್ಯಕ್ಷಳಾಗುವ ಮೊದಲೇ ನೀನು ವೈದ್ಯಮಾಡಿದ್ದು ತಪ್ಪಲ್ಲವೆ? ವರ ಕೊಟ್ಟವರಿಗೆ ಪಡೆದವರಿಗಿಂತ ಹೆಚ್ಚಿನ ಜವಾಬ್ದಾರಿ ಇರುತ್ತದೆ"**[3]

ರಾಜಕುಮಾರಿ ಹುಟ್ಟುವಾಗಲೇ ಅವಳ ಆಯುಷ್ಯ ನಿರ್ಧಾರವಾಗಿತ್ತು. ಅದನ್ನು ತಿದ್ದಲು ನನ್ನಿಂದ ಸಾಧ್ಯವಿಲ್ಲ ವಿಧಿನಿಯಮ ಎನ್ನುತ್ತಾಳೆ. ಆ ಗವಿಯಲ್ಲಿ ಬೆಳಗುವ ದೊಡ್ಡ ಜ್ಯೋತಿಗಳು ಚಿಕ್ಕ ಜ್ಯೋತಿಗಳನ್ನು ತೋರಿಸಿ ಇದರಲ್ಲಿರುವ ತೈಲದ ಪ್ರಮಾಣ ಆಯುಷ್ಯದ ಸಂಕೇತ ಎನ್ನುತ್ತಾಳೆ. ಸಂಜೀವಶಿವ ತನ್ನ ದೊಡ್ಡ ಆಯುಷ್ಯ ಜ್ಯೋತಿಯಿಂದ ತೈಲವನ್ನು ರಾಜಕುಮಾರಿಯ ಪಕ್ಕದ ಬಡಕಲು ಜ್ಯೋತಿಗೆ ಹೀಗೆ ಹೇಳುತ್ತಾ

**"ಹಾಗಿದ್ದರಿಗೋ ನನ್ನ ಶೇಷಾಯುಷ್ಯದ ಅರ್ಧವನ್ನ ರಾಜಕುಮಾರಿಗೆ ಧಾರೆಯೆರೆದಿದ್ದೇನೆ"**[4]

ಎಂದು ತೈಲವನ್ನು ಸುರಿಯುತ್ತಾನೆ. ರಾಜಕುಮಾರಿಯ ಆಯುಷ್ಯ ಜ್ಯೋತಿ ತೇಜೋಮಯವಾಗಿ ಉರಿಯತೊಡಗುತ್ತದೆ. ದೇವರು ಮತ್ತು ಮನುಷ್ಯನ ಸಂಘರ್ಷಗಳಲ್ಲಿ ಮನುಷ್ಯನಿಗೆ ಜಯವಾಗುತ್ತದೆ.

**ಮದನ ತಿಲಕ–ಮಂಜರಿ**

ಮದನ ತಿಲಕ ನಾಟಕದ ಹಾಸ್ಯಪಾತ್ರಧಾರಿ. ಈತ ಸುಖ ಲೋಲುಪ ಸುಮಾರು ಹೆಣ್ಣುಮಕ್ಕಳನ್ನು ಮದುವೆಯಾದ ರಸಿಕ, ಮಂಜರಿಯಂತಹ ಹೆಂಡತಿಯಿದ್ದರು ಮದರಂಗಿಯನ್ನು ಕನಸಿನಲ್ಲಿ ಕಾಣುತ್ತ ಚಡಪಡಿಸುತ್ತಿದ್ದನು. ಇದನ್ನು ನೋಡಿದ ಹೆಂಡತಿ ಘರ್ಷಣೆಗೆ ಇಳಿಯುತ್ತಾಳೆ.

**"ಮಂಜರಿ: ತೋಟದಲ್ಲಿ ಯಾರೂ ಇರೋದಿಲ್ಲಾಂತ ಅಲ್ಲಿಗೇ ಬರಹೇಳುತ್ತಿದ್ದೆ; ನಿನ್ನ ಕನವರಿಕೆಯಲ್ಲಿ**
**ಮದನ ತಿಲಕ: ಇದು ನಿನ್ನ ಕನಸು ಮಾರಾಯಳೆ**

**ಮಂಜರಿ: ನಿನ್ನ ನಾನು ಹೇಳ್ತರೋದು ನನ್ನ ಕನಸಾಗಿದ್ದರೆ ನಿನ್ನನ್ನ ಅಲ್ಲೇ ಒದೀತಿದ್ದೆ"**[5] ಎಂದು ಹೇಳುತ್ತಾಳೆ. ಮದನ ತಿಲಕನ ಕೆಟ್ಟ ಚಾಳಿ ಮಂಜರಿ ಅರಿತವಳಾಗಿರುತ್ತಾಳೆ. ಮದನ ತಿಲಕ ನೀನು ಮುಟ್ಟಿದರೆ ಮುನಿಯಮ್ಮ ಜಗಳಗಂಟಿ ವಿಷಕಂಠಿ ಎಂದು ತೆಗಳುತ್ತಾನೆ. ಗಂಡನ ಕೆಟ್ಟ ಚಾಳಿಯುನ್ನು ಅವಳು ತೆಗಳುತ್ತಾಳೆ.

ಈ ನಾಟಕದಲ್ಲಿ ಮದನ ತಿಲಕ–ಮಂಜರಿ, ಸಂಜೀವಶಿವ–ಶೆಟಿವಿತಾಯಿ,ಸೇಡುಮಾರಿ–ಪುಷ್ಪಗಂಧಿ, ಮಂಜರಿಯ ಭೂತ–ಮದರಂಗಿ, ಸಂಜೀವಶಿವ–ಮುದುಕಿ ಹೀಗೆ ಪಾತ್ರಗಳು ಒಂದಕ್ಕೊಂದು ಸಂಘರ್ಷದ ಮೂಲಕ ನೆಲೆಯನ್ನು ಕಂಡುಕೊಳ್ಳುತ್ತವೆ. ನಾಟಕದ ಪ್ರಾರಂಭದಲ್ಲಿ ಶೆಟಿವಿತಾಯಿ ಹಾಗೂ ಸಂಜೀವಶಿವ ಪ್ರೀತಿಯಿಂದಲೇ ಇರುತ್ತಾರೆ. ರಾಜಕುಮಾರಿಯ ವಿಷಯವಾಗಿಟ್ಟುಕೊಂಡು ಸಂಜೀವಶಿವ ತಾನೂ ಸ್ವತಂತ್ರವಾಗಿ ಬಿಡುಗಡೆ ಹೊಂದಲು ಪ್ರಯತ್ನಿಸುತ್ತಾನೆ. ಕೊನೆಗೆ ಶೆಟಿವಿತಾಯಿಗೆ ಸೋಲಾಗಿ ರಾಜಕುಮಾರಿ ಬದುಕುಳಿಯುತ್ತಾಳೆ.

**ಅಡಿಟಿಪ್ಪಣಿಗಳು :**

1. ಚಂದ್ರಶೇಖರ ಕಂಬಾರ : ಮಹಾಮಾಯಿ . ಪು – 32.
2. ಚಂದ್ರಶೇಖರ ಕಂಬಾರ : ಮಹಾಮಾಯಿ . ಪು – 34.
3. ಚಂದ್ರಶೇಖರ ಕಂಬಾರ : ಮಹಾಮಾಯಿ . ಪು–75–76.
4. ಚಂದ್ರಶೇಖರ ಕಂಬಾರ : ಮಹಾಮಾಯಿ . ಪು – 79.

ಚಂದ್ರಶೇಖರ ಕಂಬಾರ : ಮಹಾಮಾಯಿ . ಪು – 50.